International Journal of Kannada Research 2018; 4(3): 127-129

International Journal of Kannada Research
www.kannadajournal.com

**ISSN: 2454–5813**
IJKR 2018; 4(3): 127-129
© 2018 IJKR
www.kannadajournal.com
Received: 22-05-2018
Accepted: 23-06-2018

**ರಾಜಶೇಖರ.ಎಸ್.ಹೂಗಾರ**
Research Scholler Gulbarga University Kalaburagi, Karnataka, India

**Correspondence**
**ರಾಜಶೇಖರ.ಎಸ್.ಹೂಗಾರ**
Research Scholler Gulbarga University Kalaburagi, Karnataka, India

# ರಂಜಾನ್ ದರ್ಗಾರವರ ಕಾವ್ಯ–ಒಂದು ಅವಲೋಕನ

**ರಾಜಶೇಖರ.ಎಸ್.ಹೂಗಾರ**

ಹೊಸಗನ್ನಡ ಕಾವ್ಯದ ಸಂದರ್ಭದಲ್ಲಿ ಅದರಲ್ಲೂ ಬಂಡಾಯ ಕಾವ್ಯದ ಘಟ್ಟದಲ್ಲಿ ರಂಜಾನ್ ದರ್ಗಾರವರು ಪ್ರಮುಖ ಕವಿಯಾಗಿ ನಿಲ್ಲುತ್ತಾರೆ. ತಮ್ಮ ಮಹತ್ವದ ಎರಡು ಕವನ ಸಂಕಲನಗಳಾದ "ಕಾವ್ಯ ಬಂತು ಬೀದಿಗೆ" ಹಾಗೂ "ಹೊಕ್ಕಳಲ್ಲಿ ಹೂವಿದೆ" ಸಂಕಲನಗಳ ಮೂಲಕ ಅವರು ಮನೆ ಮಾತಾದವರು. ತಮ್ಮ ಪ್ರಖರ ಚಿಂತನೆಗಳ ಮೂಲಕ ಬದುಕು ಬರಹವನ್ನು ಒಂದಾಗಿಸಿಕೊಂಡವರು. ಪ್ರಗತಿಪರ ಮನೋಭಾವದ ಸಮಾಜಿಕ ಕಾಳಜಿಯುಳ್ಳ ದರ್ಗಾರವರು ತಮ್ಮ ವಿಚಾರಗಳ ಮೂಲಕ ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಸಮಾಜಪರ, ಜನಪರ, ವಿಚಾರಗಳನ್ನು ಪ್ರುಚುರ ಪಡಿಸಿದವರು. ಶರಣ ಸಿದ್ಧಾಂತದ ನೆಲೆಯಲ್ಲಿ ಸಮಾಜಿಕ ಕಾಳಜಿಯನ್ನು ಮೆರೆದವರು.

ರಂಜಾನ್ ದರ್ಗಾರವರು ಹರಿತ ಲೇಖನಿಯ ನುರಿತ ಬರಹಗಾರರು. ಅವರ ಕಾವ್ಯದ ಜೀವಾಳವೆಂದರೆ ಶ್ರಮ ಸಂಸ್ಕೃತಿಯ ಗೌರವ, ಬಂಡಾಯದ ಕಿಡಿಗಳ ಛಾಯೆ, ಯುದ್ಧ ವಿರೋಧಿ ನಿಲುವುಗಳು, ರಾಷ್ಟ್ರಪ್ರೇಮ ಧಾರ್ಮಿಕ ವಿಡಂಬನೆ, ಸಮಾಜಿಕ ವಿಡಂಬನೆ, ನಾಡು–ನುಡಿಯ ಪ್ರೇಮ, ಕೆಳವರ್ಗದವರ, ಶ್ರಮಜೀವಿಗಳ ಪರವಾದ ಒಲವು ಅವರ ಕಾವ್ಯದಲ್ಲಿ ಅರ್ಥಪೂರ್ಣವಾಗಿ ಮೂಡಿಬಂದಿರುವುದನ್ನು ಅವರ ಕವನಗಳಲ್ಲಿ ಕಾಣಬಹುದಾಗಿದೆ.

ಬಂಡಾಯದ ಮನೋಭಾವದ ಜನಪರ ಕಾಳಜಿಯ ರಂಜಾನ್ ದರ್ಗಾರವರ ಕಾವ್ಯ ಸಮಾನತೆಯ ಸಿದ್ಧಾಂತವನ್ನು ಪೋಷಿಸುತ್ತದೆ. ಅವರ ಪ್ರಕಾರ ಬಂಡಾಯವೆಂಬುದು ಒಂದು ಮನೋಧರ್ಮ ಸಮಾನತೆ ಒಂದು ಮೌಲ್ಯವೆಂಬುದು ಬಂಡಾಯ ಸಾಹಿತ್ಯ ಸಂಘಟನೆಯ ನಿಲುವಾಗಿದೆ. ಈ ಬಂಡಾಯ ಸಂಘಟನೆಯ ಮುಖ್ಯ ಉದ್ದೇಶವೆಂದರೆ ಹಿಂಸೆಯ ವಿರುದ್ಧವಾಗಿದೆ ಹಾಗೂ ಸಮಾನತೆಯ ಪರವಾಗಿದೆ. ಅಸಮಾನತೆಯೂ ಅವರನ್ನು ಬಹುವಾಗಿ ಕಾಡಿದೆ. ತಾರತಮ್ಯದ ವಿರುದ್ಧ ಅವರು ಕಿಡಿಕಾರಿದ್ದನ್ನು ಅವರ "ಪ್ರಣಾಳಿಕೆ" ಕವಿತೆಯಲ್ಲಿ ಕಾಣಬಹುದಾಗಿದೆ.

"ನಾವು ದುಡಿಯುವ ಜನ
ನಮ್ಮ ಅಧಿಕಾರ ಬಂದಾಗ
ಪೋಲಿಸರನ್ನು ನ್ಯಾಯಧೀಶರನ್ನು
ಮನುಷ್ಯರನ್ನಾಗಿ ಮಾಡುತ್ತೇವೆ.
ಟ್ಯಾಂಕ್‌ಗಳು ಬುಲ್‌ಡೋಜರ್ ಆಗುತ್ತವೆ
ತಗ್ಗು ದಿನ್ನೆಯ ನೆಲ ಸಮಾನಾಗುತ್ತದೆ.
ಬಂದೂಕಿನ ಬಾಯಲ್ಲಿ
ಗುಬ್ಬಿ ಗೂಡು ಕಟ್ಟುತ್ತದೆ.
ಕೆಂಪು ದೀಪದ ಕೆಳಗೆ ಉದ್ಯಾನವನಗಳೇಳುತ್ತವೆ.
ಒಂದೇ ಒಂದು ಸಲ ಅವಕಾಶಸಿಗಲಿ
ಭೂಗೋಳದ ತುಂಬೆಲ್ಲಾ
ಶಾಂತಿಯುತ ಬೀಜ ಬಿತ್ತುತ್ತೇವೆ.
ಮುಂದೆ ನಮ್ಮ ಮಕ್ಕಳು ಶಬ್ದಕೋಶ
ತಿರುವಿ ವೀರಗಲ್ಲುಗಳ ಅರ್ಥ ಹುಡುಕುತ್ತಾರೆ".

(ಕಾವ್ಯ ಬಂತು ಬೀದಿಗೆ ಪ್ರಣಾಳಿಕೆ)

ಈ ಮೇಲಿನ ಕವಿತೆಯಲ್ಲಿ ಶತ-ಶತಮಾನಗಳಿಂದ ನಡೆದು ಬಂದ ದೌರ್ಜನ್ಯ, ಅನ್ಯಾಯ, ಅಂಧಾನುಕರಣೆಯನ್ನು ಹೊಡೆದೊಡಿಸಿ ಸುಂದರ ಸಮಾಜವನ್ನು ನಿರ್ಮಾಣ ಮಾಡೋಣವೆಂಬ ಸದಾಶಯವು ಕವಿಗಳದ್ದಾಗಿದೆ.
ಹಳ್ಳಿಯ ಕೂಗು ದಿಲ್ಲಿಗೆ ಮುಟ್ಟಬೇಕಾದರೆ ಜನರು ಪಡುವ ಹರಸಾಹಸವನ್ನು "ಏ ದೆಹಲಿ" ಎಂಬ ಕವನದಲ್ಲಿ ತುಂಬಾ ಅರ್ಥಪೂರ್ಣವಾಗಿದೆ.

" ಚಿಂದಿಯುಟ್ಟ ಹೊಟ್ಟೆಗೆ ಕಟ್ಟೆ ಹಸುವಿನ ಗಂಟು
ಬದುಕಿನುದ್ದಕ್ಕೂ ಪರದೇಶಿಗಳಂತಿರುವಾಗ
ಏ ದೆಹಲಿ ನೀನೆ ಹೇಳೆ ನಿಜ ಹೇಳೆ
ಉಳಿಯುವುದೇ ನಿನ್ನೊಡನೆ ನಮ್ಮ ನಂಟು?
ನಿನ್ನ ಎತ್ತರದ ಮಿನಾರುಗಳಿಂದ
ಜಂತರ-ಮಂತರದ ತಂತ್ರದಿಂದ

ಚಾಂದಿನೀ ಚೌಕದ ಕೊಳಕಿನಿಂದ
ಬೆರಗುಗೊಳಿಸಲಾರೆ ನಮ್ಮನ್ನು
ನಿನ್ನ ಚಳಿಗೆ ಬೆದರೆವು ನಾವು.
ಅಂಜೆವು ತುರ್ಕಮನ್ ಗೇಟಿನ ಏಟಿಗೆ
ನಿನ್ನ ಬೇಸಿಗೆಗೆ ಬೆದರೆವು ನಾವು

ಲಗ್ಗೆಯಿಡುವೆವು ನರಕದ ಕೋಟೆಗೆ.
ನಿನ್ನ ಚದುರಂಗದಾಟ ನಡೆದಿನ್ನೂ
ನಮ್ಮ ಆಸೆಯ ಚಿಗುರು ಚಿವುಟುವ
ಪ್ರಜಾಪ್ರಭುತ್ವದ ಪ್ರಭುಗಳೊಡನೆ
ಚಕ್ಕಂದವಾಡುವ ಚದುರೆ ನೀನು.

ಅಂತಃಪೂರದಿಂದ ಜನಾನ ಖಾನೆಗಿಳಿದವಳೇ
ಬಿಳಿಯರು ಬಂದಾಗ ಬೆಳ್ಳಗಾದವಳೇ
ಏ ಗರತಿ ಒಂದಿಷ್ಟು ಹೊರಳಿ ನೋಡೇ
ರಕ್ತ ಬೆವರು ಸುರಿಸಿ ನಿನ್ನ ಬೆಳಸಿದವರ.

ಬೇರು ಬಿಟ್ಟಿದೆ ಸ್ವಾತಂತ್ರ್ಯಗಂಬ
ನಮ್ಮ ರಕ್ತದ ಕೋಟೆಯಲ್ಲಿ
ನೋಡಲ್ಲಿ ಅಶೋಕ ಚಕ್ರ
ಸದಾ ತಿರುಗುತ್ತಿದೆ ಕಾಲಚಕ್ರ.

ಹೀಗೆ ರಂಜಾನ್ ದರ್ಗಾರವರು ರಾಷ್ಟ್ರ ರಾಜಧಾನಿ ದೆಹಲಿಯ ಗಮ್ಮತ್ತನ್ನು ತುಂಬಾ ವಿಡಂಬನಾತ್ಮಕವಾಗಿ ತಮ್ಮ ಈ ಅದ್ಭುತವಾದ ಕವಿತೆಯಲ್ಲಿ ಸೆರೆಹಿಡಿದಿದ್ದಾರೆ. ರಂಜಾನ್ ದರ್ಗಾರವರು ಅಸಮಾನತೆಯನ್ನು ಕಂಡಾಗಲೆಲ್ಲ ಕೆಂಡ ದುಂಡೆಯಾಗುತ್ತಾರೆ. ಅದರಲ್ಲೂ ದಲಿತರನ್ನು ಶೋಷಿಸುವ ಪುರೋಹಿತ ವ್ಯವಸ್ಥೆಯನ್ನು ಕಂಡು ಸಿಡಿಮಿಡಿಗೊಳ್ಳುತ್ತಾರೆ.

"ಅಧ್ಯಾತ್ಮದ ಸಗಟು ವ್ಯಾಪಾರಿಗಳೇ
ಆತ್ಮವಂಚಕ ಜರತಾರಿಗಳೇ
ದಲಿತರು ನರಳುವ ಕ್ಷಣದಲ್ಲಿ
ನೀವೆಲ್ಲಾ ಹೋಗುವಿರಿ ಎಲ್ಲಿ?
ನಿಮ್ಮ ಆತ್ಮ ಹಂದಿಯಾಗಲಿ
ತಲೆ ತುಂಬಿದ ಮಲ ತಿನ್ನಲಿ"
(ಹೊಕ್ಕಳಲ್ಲಿ ಹೂವಿದೆ ಕವನ ಸಂಕಲನ- ಹಂದಿ ಆಗಲಿ ಕವಿತೆ)

ದಲಿತರಿಗಾಗುವ ಶೋಷಣೆಯನ್ನು ಕಂಡು ದರ್ಗಾರವರ ಆವೇಶದ ಕಿಚ್ಚು ಹೊರಹೊಮ್ಮುತ್ತದೆ. ತಾರತಮ್ಯ ಮಾಡುವವರ ಆತ್ಮ ಹಂದಿಯಾಗಲಿ ಎಂದು ಖಾರವಾಗಿ ಅಭಿವ್ಯಕ್ತಿಸಿದ್ದಾರೆ. ದೇವರು ಧರ್ಮದ ಹೆಸರು ಹೇಳಿ ತಮ್ಮ ಬೇಳೆ ಬೇಯಿಸಿಕೊಳ್ಳುವಂತಹ ಢಂಬಾಚಾರಿಗಳನ್ನು ದರ್ಗಾರವರು ಖಂಡಿಸಿದ್ದಾರೆ.
ತಮ್ಮ ಕವಿತೆಯಲ್ಲಿ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ. ದಲಿತರು ಈ ನೆಲದ ನಿಜವಾದ ವಾರಸುದಾರರು ಎಂದಿದ್ದಾರೆ. ಶ್ರೀ ರಂಜಾನ್ ದರ್ಗಾರವರಿಗೂ ಸಹ ಭ್ರಷ್ಟಚಾರದ ಸಮಸ್ಯೆ ಕಾಡಿದೆ ಅದನ್ನು ತಮ್ಮ "ವಿಚಿತ್ರ" ಕವನದಲ್ಲಿ ಮಾರ್ಮಿಕವಾಗಿ ಹಿಡಿದಿಟ್ಟಿದ್ದಾರೆ.

"ಲಂಚ ವಿರೋಧ ಅಧಿಕಾರಿಯ
ಅಪಘಾತವಾದಾಗ
ಕಪ್ಪು ರಕ್ತ ಹರಿದಿತ್ತು
ವಿಚಿತ್ರವೆಂದರೆ
ಯಾರಿಗೂ ವಿಚಿತ್ರವೆನಿಸಲಿಲ್ಲ"
(ಹೊಕ್ಕಳಲ್ಲಿ ಹೂವಿದೆ-ವಿಚಿತ್ರ)

ದೇಶಾದ್ಯಂತ ಭಷ್ಟಾಚಾರ ಸಮಸ್ಯೆಯ ತಾಂಡವವನ್ನು ಭ್ರಷ್ಟ ಅಧಿಕಾರಿಯ ಉಪಮೇಯ ಮೂಲಕ ಚಿತ್ರಿಸಿದ್ದಾರೆ.
"ಹುಣ್ಣಿಮೆ ರಾತ್ರಿ" ಎಂಬ ಕವನವು ತುಂಬಾ ಮನೋಜ್ಞವಾಗಿ ಮೂಡಿಬಂದಿದೆ.

"ಹುಣ್ಣಿಮೆ ರಾತ್ರಿ
ಬೆಳಕಿಲ್ಲದ ನನ್ನ ಗೂಡಿಸಲ ತುಂಬ
ಅಮವಾಸೆಯ ನಕ್ಷತ್ರಗಳು"
(ಹೊಕ್ಕಳಲ್ಲಿ ಹೂವಿದೆ-ಹುಣ್ಣಿಮೆ ರಾತ್ರಿ)

ದರ್ಗಾರವರು ಕಾವ್ಯ ಕಟ್ಟುವ ಕಲೆಯಲ್ಲಿ ತುಂಬಾ ನಿಷ್ಣಾತರು ಹೀಗಾಗಿ ಕವಿತೆಗಳು ಪ್ರತಿ ಒಬ್ಬರನ್ನು ಆಕರ್ಷಿಸುತ್ತವೆ. ಬಹುತೇಕ ಕವಿತೆಗಳಲ್ಲಿ ದರ್ಗಾರವರ ಜನಪರ ಕಾಳಜಿ ಎದ್ದು ಕಾಣುತ್ತದೆ. ದೀನ ದಲಿತರ, ಶೋಷಿತರನ್ನು ಕಂಡರೆ ಅವರ ಲೇಖನಿ ಮತ್ತಷ್ಟು ಹರಿತವಾಗುತ್ತದೆ. "ಕೇಳುತ್ತೇವೆ ನಾನು" ಎಂಬ ಕವಿತೆಯಲ್ಲಿ ತಮ್ಮ ಅಂತರಾಳದ ಬೇಗುದಿಯನ್ನು ತೀವ್ರತರವಾಗಿ ಹೊರಹಾಕಿದ್ದಾರೆ.

"ನನ್ನ ಜನರನ್ನು ಕೊಂದ
ಖಡ್ಗಗಳ ಮೇಲೆ
ಶಾಂತಿ ಮಂತ್ರಗಳನ್ನೇಕೆ
ಕೊರೆದಿದ್ದಾರೆ.
ಅಸತ್ಯದ ಕತ್ತಲೇಕೆ
ಮನೆ ಮಾಡಿದೆ
ಸತ್ಯದ ಬೆಳಕಿನಲ್ಲಿ
ಸೂರ್ಯನೇ ಹೇಳು
ಹೆಪ್ಪುಗಟ್ಟಿದ ಮನಸ್ಸುಗಳನ್ನು
ಕರಗಿಸುವುದೆಂತು?
ಮೋಡಗಳೇ ತಿಳಿಸಿ
ಮಳೆಯಲ್ಲಿ ಸೇರಿಲ್ಲವೆ
ಬಡವರ ಕಣ್ಣೀರು?
ಇತಿಹಾಸವೇ ನೋಡು
ಕಾಲನ ಹೆಜ್ಜೆಗುರುತುಗಳಲ್ಲಿ
ಕ್ರೂರ ಗೆರೆಗಳನ್ನು ಗುರುತಿಸು
ಭವಿಷ್ಯವೇ ಕೇಳು

ಎಲ್ಲೆಡೆ ಆವರಿಸಿದೆ ನೋವು
ಪ್ರಳಯಕೆ ಮೊದಲು
ಎಚ್ಚರಾಗುತ್ತಾರೆ ಅವರು.
(ಹೊಕ್ಕಳಲ್ಲಿ ಹೂವಿದೆ–ಕೇಳುತ್ತೇನೆ ನಾನು)

ಹೀಗೆ ಶತ–ಶತಮಾನಗಳಿಂದ ನಡೆದು ಬಂದ ಅನ್ಯಾಯ, ದೌರ್ಜನ್ಯ, ಅಸಮಾನತೆಯನ್ನು ದಿಟ್ಟವಾಗಿ ಪ್ರಶ್ನಿಸುವ ದರ್ಗಾರವರ ಮನೋಭಾವ ಮೆಚ್ಚುವಂತಹದ್ದು.

ಶ್ರೀ ರಂಜಾನ್ ದರ್ಗಾರವರು ಪ್ರಗತಿಪರ ಚಿಂತನೆಯ, ಜನಪರ ನಿಲುವಿನ, ಬಂಡಾಯ ಮನಸ್ಸಿನ, ಸಮಾನತೆಯ ಚಿಂತಕರು. ಎಲ್ಲೆಲ್ಲಿ ಶೋಷಣೆ, ಅಸಮಾನತೆ, ಯುದ್ಧದ ಉನ್ಮಾದ ಪುರೋಹಿತಶಾಹಿಯ ಅಟ್ಟಹಾಸಗಳನ್ನು ಕಂಡಾಗ ಇವರು ಸಿಡಿಮಿಡಿಗೊಳ್ಳುತ್ತಾರೆ. ದರ್ಗಾರವರು ದೇಶ ಸುತ್ತಿದವರು ಹಾಗೂ ಕೋಶ ಓದಿದವರು. ಹಲವಾರು ಜನಪರ ಸಂಘಟನೆಗಳೊಂದಿಗೆ ತಮ್ಮನ್ನು ಆತ್ಮೀಯವಾಗಿ ಬೆಸೆದುಕೊಂಡವರು. ಹೀಗಾಗಿ ಅವರ ಕಾವ್ಯದ ತುಂಬಾ ಹುಳುಕು ಮುಖವಾಡಗಳನ್ನು ಕಂಡಲ್ಲಿ, ಅಂಧಾನುಕರಣೆ, ಅಸಮಾನತೆಗೆ ತಮ್ಮ ಪ್ರಖರ ಚಿಂತನೆಗಳ ಮೂಲಕ ತಕ್ಷಣಕ್ಕೆ ಸ್ಪಂದಿಸುತ್ತಾರೆ. ಹೀಗಾಗಿ ರಂಜಾನ್ ದರ್ಗಾರವರು ತಮ್ಮ ಪ್ರಖರ ಚಿಂತನೆ ಹಾಗೂ ಹರಿತವಾದ ಲೇಖನಿಯ ಮೂಲಕ ಸಮಾಜಮುಖಿ ಲೇಖಕರಾಗಿ, ಕವಿಗಳಾಗಿ ಕನ್ನಡ ಸಾಹಿತ್ಯದಲ್ಲಿ ಗಮನ ಸೆಳೆಯುತ್ತಾರೆ.